## 1 ನೇ ಹೆಚ್ಚುವರಿ ಪ್ರ.ದ.ನ್ಯಾ.ದಂಡಾಧಿಕಾರಿಯವರ ನ್ಯಾಯಾಲಯ, ಶಿರಸಿ

**ಸಿ.ಸಿ. ನಂಬರಃ** 1191/2020

**ಫಿರ್ಯಾದುದಾರರು** : **ಶಿರಸಿ ಹೊಸ ಮಾರುಕಟ್ಟೆ ಪೋಲೀಸ್ ಠಾಣೆ..**

**–ವಿರುದ್ಧ –**

**ಆರೋಪಿ** : **ಹಾರಿಸ್ ತಂದೆ ಅಬ್ದುಲ್ ಜಬ್ಬಾರ ಖಾನ್**

.

## ದೋಷಾರೋಪಣೆ

**ಶ್ರೀ ರಾಜು ಕೆ ಶೆಡಬಾಳ್ಕರ**, ಬಿ.ಎ., ಎಲ್.ಎಲ್.ಬಿ. ಎರಡನೇ ಹೆಚ್ಚುವರಿ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಶಿರಸಿ ಎಂಬುವವರು

**ಆರೋಪಿಯಾದ** : **ಹಾರಿಸ್ ತಂದೆ ಅಬ್ದುಲ್ ಜಬ್ಬಾರ ಖಾನ್**
ಪ್ರಾ.ಅ.21 ವರ್ಷ,
ಸಾಃ ಸಲಾಮತನಗರ, ಗುಡ್ಡದಮನೆ,
ತಾಃ ಶಿರಸಿ (ಉ.ಕ.)

ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆ,

ದಿನಾಂಕಃ 29-08-2019 ರಂದು 09-00 ಗಂಟೆಗೆ ಶಿರಸಿ ಹೊಸ ಮಾರುಕಟ್ಟೆ ಪೋಲೀಸ ಠಾಣಾ ವ್ಯಾಪ್ತಿಯಲ್ಲಿ ಬರುವ ಶಿರಸಿ ನಗರದ ಸಲಾಮತನಗರದ ಕೆಳಗಿನ ಗುಡ್ಡದಮನೆಯಲ್ಲಿರುವ ತನ್ನ ಮನೆಯಲ್ಲಿ ಆರೋಪಿಯಾದ ನೀವು ಒಂಟಿ ನಳಿಕೆಯ ನಾಡ ಬಂದೂಕನ್ನು ಸಂಬಂಧಪಟ್ಟ ಇಲಾಖೆಯಿಂದ ಯಾವುದೇ ರೀತಿಯ ಅಧೀಕೃತ ಲೈಸನ್ಸ್ ವ ಪರವಾನಿಗೆ ಇಲ್ಲದೇ ಅನಧೀಕೃತವಾಗಿ ನಿಮ್ಮ ತಾಬಾದಲ್ಲಿ ಇಟ್ಟುಕೊಳ್ಳುವ ಮೂಲಕ

ಭಾರತೀಯ ಆಯುಧ ಕಾಯ್ದೆ ಕಲಂ 25, 1(ಬಿ) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಎಸಗಿರುತ್ತಿರೆಂದು ನಿಮ್ಮ ಮೇಲೆ ಆಪಾದನೆ ಮಾಡಲಾಗಿದೆ.

ಈ ಮೇಲ್ಕಂಡ ಅಪರಾಧಗಳಿಗಾಗಿ ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ನಿಮ್ಮನ್ನು ವಿಚಾರಣೆಗೆ ಒಳಪಡಿಸಲು ಈ ಮೂಲಕ ನಿರ್ದೇಶಿಸಲಾಗಿದೆ.

ಪ್ರಶ್ನೆ 1: ನಿಮಗೆ ಈಗ ಓದಿ ಹೇಳಿದ ದೋಷಾರೋಪಣೆ ತಿಳಿಯಿತೇ?

ಉತ್ತರಃ ತಿಳಿಯಿತು ಎಂದು ಉತ್ತರಿಸಿರುತ್ತಾರೆ

ಪ್ರಶ್ನೆ 2: ಆರೋಪಣೆಯನ್ನು ಒಪ್ಪಕೊಳ್ಳುವಿರೋ ಅಥವಾ ವಿಚಾರಣೆ ಬಯಸುವಿರೋ?

ಉತ್ತರಃ ವಿಚಾರಣೆ ಬಯಸುತ್ತಾರೆ

(ಆರೋಪಿತರಿಗೆ ಮೇಲಿನ ದೋಷಾರೋಪಣೆಯನ್ನು ಅವರಿಗೆ ತಿಳಿದ ಕನ್ನಡ ಭಾಷೆಯಲ್ಲಿ ಓದಿ ಹೇಳಿ, ಅವರು ಕೊಟ್ಟ ಉತ್ತರಗಳನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಗಿದೆಯೆಂದು ದೃಢೀಕರಿಸಲಾಗಿದೆ.)

ದಿನಾಂಕ : 23-06-2022 2 ನೇ ಹೆ.ಪ್ರ.ದ.ನ್ಯಾದಂ., ಶಿರಸಿ